ಅದೇ ಸಮಯಕ್ಕೆ ರಾಜೇಶ್ ಒಳಬಂದ. ಅವನನ್ನು ನೋಡಿ ವ್ಯಗ್ರಳಾದ ನವಮಿ,

"ಇನ್ನೇನು ಮಾಡಲಿಕ್ಕೆ ಬಂದೆ ಇಲ್ಲಿ? ನನ್ನ ಮತ್ತು ನನ್ನ ಮಗಳ ಭವಿಷ್ಯ ಹಾಳು ಮಾಡಿ ಈಗ ಸಂತನ ರೀತಿ ಬಂದು ನಿಂತಿರುವೆಯಾ? ಗೇಟ್ ಲಾಸ್ಟ್!" ಎಂದು ಕಿರುಚಿದಳು.

"ನಿಮ್ಮ ಪರ್ಸನಲ್ ವಿಷಯ ಬದಿಗಿಟ್ಟು ಕೇಸ್‌ನ ವಿಷಯ ಮಾತಾಡೋಣವಾ? ಈ ಕೇಸ್‌ನಲ್ಲಿ ನಿಮ್ಮ ಮಗಳ ಕಸ್ಟಡಿ ಯಾರಿಗೆ ಅನ್ನುವುದೇ ಅತಿದೊಡ್ಡ ವಿಷಯ. ನಿಮ್ಮಿಬ್ಬರ ಮಧ್ಯೆ ಸುತ್ತಿ ಬಳಸಿ ಅದೇ ವಿಷಯ ಬರುತ್ತಿದೆ. ಅದನ್ನು ಆ ಹುಡುಗಿ ಇಲ್ಲಿಯೇ ಡಿಸೈಡ್ ಮಾಡಲಿ... ಆಗ ನಮಗೂ ಕೇಸ್ ಸಾಲ್ವ್ ಮಾಡಲು ಸುಲಭವಾಗುತ್ತದೆ." ವ್ಯಂಗ್ಯವಾಗಿ ನುಡಿದ ನಾಗೇಶ್.

"ಅವಳು ಬರುವ ಹಾಗಿಲ್ಲ... ಅವಳಿಗೆ ಕಳೆದ 20 ದಿನದಿಂದ ಟ್ರೀಟ್‌ಮೆಂಟ್ ನಡೆಯುತ್ತಿದೆ... ಯು ನೊ... ಹೆಣ್ಣು ಮಕ್ಕಳ ಪ್ರಾಬ್ಲಂ."

"ನಾವೇ ಅಲ್ಲಿಗೆ ಹೋಗೋಣ... ಏನಂತೀರಾ?"

"ಅವಳು ಹೇಳುತ್ತಿದ್ದಾಳಲ್ಲ... ಮಗಳನ್ನು ಇದರಲ್ಲಿ ಇನ್ವಾಲ್ವ್ ಮಾಡುವುದು ಬೇಡ ಅಂತ... ಜಗಳ ಇರೋದು ನಮ್ಮಿಬ್ಬರಲ್ಲಿ. ನಾವೇ ಬಗೆ ಹರಿಸಿಕೊಳ್ಳುತ್ತೇವೆ. ಅದಕ್ಕೆ ಆ ಚಿಕ್ಕ ಹುಡುಗಿಗೆ ಯಾಕೆ ತೊಂದರೆ ಕೊಡ್ತೀರಿ?" ಕೂಗಿದ ರಾಜೇಶ್.

ಒಂದೆರಡು ಕ್ಷಣದ ಮೌನದ ನಂತರ,

"ಇನ್ನು ಮುಚ್ಚಿಡಲು ಸಾಧ್ಯವಿಲ್ಲ ನವಮಿ... ನಿನ್ನ ಮತ್ತು ಚೇತನ್ ಸಂಬಂಧ ಮಗಳು ಹೇಳುವುದಕ್ಕಿಂತ ನೀನೇ ಹೇಳಿ ಒಪ್ಪಿಕೊಂಡುಬಿಡು. ಎಲ್ಲಾ ಒಪ್ಪಿಕೊ ನವಮಿ. ಮಗಳನ್ನು ನಾನು ಚೆನ್ನಾಗಿ ನೋಡಿಕೊಳ್ಳುತ್ತೇನೆ..." ರಾಜೇಶ್ ಸಣ್ಣ ಧ್ವನಿಯಲ್ಲಿ ನುಡಿದ.

ಒಂದೆರಡು ಕ್ಷಣಗಳ ಮೌನದ ನಂತರ ನವಮಿ ಜೋರಾಗಿ ಅಳತೊಡಗಿದಳು.

"ಸರ್ ನನಗೆ ಡೈವೋರ್ಸ್ ಪ್ರೆಶರ್ ಇತ್ತು... ರಾಜೇಶ್, ನನಗೆ ಯಾವ ಆದಾಯ ಇಲ್ಲ. ಹಾಗಾಗಿ ಮಗಳ ಕಸ್ಟಡಿಗೆ ಒಪ್ಪಲ್ಲ ಅಂದಿದ್ದ. ಹೇಗಾದರೂ ಮಾಡಿ ಸಿನಿಮಾ ಕೆರಿಯರ್ ಮುಂದುವರೆಸೋಣ ಅಂತ ಚೇತನ್‌ಕುಮಾರನನ್ನು ಮತ್ತೆ ಪರಿಚಯಿಸಿಕೊಂಡೆ. ಅವನು ನನಗೆ ಕಾಂಪ್ರೋಮೈಸ್ ಆಗು ಅಂತ ಒತ್ತಾಯ ಮಾಡಿದ. ಅಂದು ಆವೇಶದಲ್ಲಿ ಸಾಯಿಸಿಬಿಟ್ಟೆ ಸರ್... ಆಮೇಲೆ ರಾಜೇಶ್‌ಗೆ ಮಗಳನ್ನು ನಿನ್ನ ಕಸ್ಟಡಿಗೆ ಕೊಡ್ತೀನಿ ನನ್ನ ಉಳಿಸು ಅಂತ ಹೇಳಿ ಸುಳ್ಳು ಸಾಕ್ಷಿ ಸೃಷ್ಟಿಸಿದೆ."

ಅವಳ ಮಾತುಗಳನ್ನು ಕೇಳಿ ಜೋರಾಗಿ ಚಪ್ಪಾಳೆ ತಟ್ಟುತ್ತಾ ನಾಗೇಶ್,

"ನೀವು ಅಭಿನೇತ್ರಿ ಅಂತಾ ಗೊತ್ತಿದೆ. ಆದರೆ ಇಂಥಾ ದೊಡ್ಡ ಅಭಿನೇತ್ರಿ ಅಂತಾ ಗೊತ್ತಿರಲಿಲ್ಲ. ಡೈವೋರ್ಸ್ ಮಾಡಬೇಕಿರುವ ಗಂಡನನ್ನು ಬಚಾವ್ ಮಾಡಲು ಇಂಥಾ ದೊಡ್ಡ ನಾಟಕವಾ?"

ನವಮಿ ದಂಗಾಗಿ ತನ್ನ ಅಳು ನಿಲ್ಲಿಸಿದಳು.

ನಾಗೇಶ್, ರಾಜೇಶ್ ಕಡೆ ತಿರುಗಿದ.

ರಾಜೇಶ್ ತಲೆ ತಗ್ಗಿಸಿ ನಿಂತಿದ್ದ.

"ಸರ್ ನೀವು ಹೇಳುವುದು ನಿಜ! ನವಮಿ ಕೊಲೆ ಮಾಡಿಲ್ಲ. ಚೇತನ್‌ಕುಮಾರ್ ಮತ್ತು ನವಮಿಗೆ ಸಂಬಂಧ ಇದೆ ಅಂತಾ ಪ್ರೂವ್ ಮಾಡಿದರೆ ಮಗಳ ಕಸ್ಟಡಿ ಸಿಗುವುದು ಸುಲಭ ಆಗುತ್ತದೆ ಅಂತ ಯೋಚಿಸಿ ಅಂದು ಅವನ ಆಫೀಸ್‌ಗೆ ಹೋಗಿದ್ದೆ. ಅಂದು ನನಗೂ ಅವನಿಗೂ ಜಗಳ ಆಗಿ ನಾನು ಅವನಿಗೆ ಬ್ರಾಸ್ ವಾಜ್‌ನಿಂದ ಹೊಡೆದೆ. ಅದೇನು ಕೋಪ ಬಂದಿತ್ತೋ ಗೊತ್ತಿಲ್ಲ ಅನೇಕ ಬಾರಿ ಹೊಡೆದೆ. ನವಮಿಯನ್ನು ಈ ಕೊಲೆಯಲ್ಲಿ ಸಿಕ್ಕಿಸಲು ಹೋಗಿ ನಾನೇ ಸಿಕ್ಕಿ ಹಾಕಿಕೊಂಡೆ."

ರಾಜೇಶ್ ತಲೆ ತಗ್ಗಿಸಿ ನಿಂತಿದ್ದ.

"ಸರ್ ಕೇಸ್ ಸಾಲ್ವ್ ಆಯಿತಾ...ಈಗ ಯಾರನ್ನ ಅರೆಸ್ಟ್ ಮಾಡಬೇಕು?" ಸುರೇಶ ಪ್ರಶ್ನಿಸಿದ.